CAREERINDIA

| Roll No. | | | | | | | | | | | Serial No. of Q. C. A. B. |
|---|---|---|---|---|---|---|---|---|---|---|---|

ಒಟ್ಟು ಪ್ರಶ್ನೆಗಳ ಸಂಖ್ಯೆ : 56 ] [ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 24

Total No. of Questions : 56 ] [ Total No. of Printed Pages : 24

**ಸಂಕೇತ ಸಂಖ್ಯೆ : 85-K**

**Code No. : 85-K**

# ವಿಷಯ : ಸಮಾಜ ವಿಜ್ಞಾನ

# Subject : SOCIAL SCIENCE

( ಕನ್ನಡ ಭಾಷಾಂತರ )

( Kannada Version )

ದಿನಾಂಕ : 22. 06. 2012 ] [ Date : 22. 06. 2012

ಸಮಯ : ಬೆಳಿಗ್ಗೆ 9-30 ರಿಂದ ಮಧ್ಯಾಹ್ನ 12-45 ರವರೆಗೆ ] [ Time : 9-30 A.M. to 12-45 P.M

ಪರಮಾವಧಿ ಅಂಕಗಳು : 100 ] [ Max. Marks : 100

**FOR OFFICE USE ONLY**

| Q. No. | Marks | Q. No. | Marks | Q. No. | Marks | Q. No. | Marks | Q. No. | Marks |
|---|---|---|---|---|---|---|---|---|---|
| 1. | | 13. | | 25. | | 37. | | 49. | |
| 2. | | 14. | | 26. | | 38. | | 50. | |
| 3. | | 15. | | 27. | | 39. | | 51. | |
| 4. | | 16. | | 28. | | 40. | | 52. | |
| 5. | | 17. | | 29. | | 41. | | 53. | |
| 6. | | 18. | | 30. | | 42. | | 54. | |
| 7. | | 19. | | 31. | | 43. | | 55. | |
| 8. | | 20. | | 32. | | 44. | | 56. | |
| 9. | | 21. | | 33. | | 45. | | × | |
| 10. | | 22. | | 34. | | 46. | | × | |
| 11. | | 23. | | 35. | | 47. | | × | |
| 12. | | 24. | | 36. | | 48. | | × | |
| | | | | | | | | ***Total Marks*** | |

| Total Marks in words | | Grand Total | |
|---|---|---|---|
| 1. ✓ | | ✓ | ✓ |
| 2. ✓ | | | |
| *Signature of Evaluators* | *Registration No.* | *Signature of the Deputy Chief* | *Signature of the Room Invigilator* |

7314798 [ Turn over

www.careerindia.com

*ಸಾಮಾನ್ಯ ಸೂಚನೆಗಳು :*

i) ಈ ಪ್ರಶ್ನೋತ್ತರ ಕಿರು ಪುಸ್ತಕವು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 56 ಪ್ರಶ್ನೆಗಳನ್ನು ಹೊಂದಿದೆ.

ii) ಪ್ರತಿಯೊಂದು ವಸ್ತುನಿಷ್ಠ ಮಾದರಿ ಪ್ರಶ್ನೆಗೆ ಉತ್ತರಕ್ಕಾಗಿ ಜಾಗವನ್ನು ಕೊಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.

iii) ವಿಷಯನಿಷ್ಠ ಮಾದರಿ ಪ್ರಶ್ನೆಯ ಉತ್ತರಗಳಿಗೆ ಸಾಕಷ್ಟು ಜಾಗವನ್ನು ಕೊಡಲಾಗಿದೆ. ಉತ್ತರಗಳನ್ನು ಆಯಾ ಜಾಗಗಳಲ್ಲಿಯೇ ಬರೆಯಿರಿ.

iv) ವಸ್ತುನಿಷ್ಠ ಮಾದರಿ ಮತ್ತು ವಿಷಯನಿಷ್ಠ ಮಾದರಿ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಅನುಸರಿಸಿ.

v) ವಿದ್ಯಾರ್ಥಿಗಳು ಪೆನ್ಸಿಲ್‌ನಿಂದ (ಸೀಸದ ಕಡ್ಡಿ) ಉತ್ತರಗಳನ್ನು ಬರೆಯಬಾರದು. ಪೆನ್ಸಿಲ್‌ನಿಂದ ಉತ್ತರ ಬರೆದಲ್ಲಿ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ. (ನಕ್ಷೆಗಳು, ರೇಖಾಚಿತ್ರಗಳು ಮತ್ತು ಭೂಪಟಗಳನ್ನು ಬಿಟ್ಟು).

vi) ಬಹು-ಆಯ್ಕೆ, ಖಾಲಿ ಸ್ಥಳಗಳನ್ನು ಭರ್ತಿ ಮಾಡುವುದು, ಹೊಂದಿಸಿ ಬರೆಯುವ ಪ್ರಶ್ನೆಗಳ ವಿಷಯದಲ್ಲಿ ಕೆರೆದು ಅಳಿಸುವುದು / ತಿದ್ದಿ ಬರೆಯುವುದು / ಗುರುತಿಸುವುದು ಮಾಡಿದಲ್ಲಿ ಮೌಲ್ಯಮಾಪನಕ್ಕೆ ಅನರ್ಹವಾಗುತ್ತದೆ.

vii) ಪ್ರಶ್ನೆ ಪತ್ರಿಕೆಯನ್ನು ಓದಲು 15 ನಿಮಿಷಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.

I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕೆ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ : $15 \times 1 = 15$

1. ಇಂಗ್ಲಿಷ್ ಶಿಕ್ಷಣವನ್ನು ಭಾರತದಲ್ಲಿ .................ರ ಸಲಹೆಯಂತೆ ಪರಿಚಯಿಸಲಾಯಿತು.

   (A) ವಿಲಿಯಂ ಬೆಂಟಿಂಕ್

   (B) ಮೆಕಾಲೆ

   (C) ಸರ್ ಚಾರ್ಲ್ಸ್ ವುಡ್

   (D) ಡಾಲ್‌ಹೌಸಿ

   *ಉತ್ತರ :* ____________________



www.careerindia.com

CAREERINDIA



2. ಪ್ರಾಂತೀಯ ಸ್ವಾಯತ್ತತೆಯನ್ನು ನೀಡಿದ ಶಾಸನ

(A) 1858 ರ ಭಾರತ ಸರ್ಕಾರ ಶಾಸನ

(B) 1919 ರ ಭಾರತ ಸರ್ಕಾರ ಶಾಸನ

(C) 1935 ರ ಭಾರತ ಸರ್ಕಾರ ಶಾಸನ

(D) 1947 ರ ಭಾರತ ಸ್ವಾತಂತ್ರ್ಯದ ಶಾಸನ

ಉತ್ತರ : ______________________________

3. ಕರ್ನಾಟಕದ ಅಸಹಕಾರ ಚಳುವಳಿಯಲ್ಲಿ ಪಾತ್ರವಹಿಸಿದ ಬಳ್ಳಾರಿಯ ಜನಪ್ರಿಯ ವಕೀಲ

(A) ಜಯರಾವ್ ನರಗುಂದ

(B) ಕೋಲಾಚಲಂ ವೆಂಕಟರಾವ್

(C) ಕಾರ್ನಾಡ್ ಸದಾಶಿವರಾವ್

(D) ಶ್ರೀನಿವಾಸರಾವ್ ಕೌಜಲಗಿ

ಉತ್ತರ : ______________________________

4. ಕರ್ನಾಟಕದ ಏಕೀಕರಣ ಸಮಿತಿಯ ಮುಖ್ಯಸ್ಥರಾಗಿದ್ದವರು

(A) ರಾಮಕೃಷ್ಣ ಕಾರಂತ

(B) ಆಲವಂಡಿ ಶಿವಮೂರ್ತಿಸ್ವಾಮಿ

(C) ಎಸ್. ನಿಜಲಿಂಗಪ್ಪ

(D) ಆಲೂರು ವೆಂಕಟರಾವ್

ಉತ್ತರ : ______________________________

www.careerindia.com

CAREERINDIA



5. ರಾಷ್ಟ್ರ ಸಂಘವು ಸ್ಥಾಪಿತವಾದ ವರ್ಷ

   (A) 1916

   (B) 1917

   (C) 1918

   (D) 1919

   ಉತ್ತರ : ____________________

6. ಫ್ಯಾಸಿಸ್ಟ್ ಪಕ್ಷವನ್ನು ಸ್ಥಾಪಿಸಿದವರು

   (A) ಹಿಟ್ಲರ್

   (B) ಹಿಂಡೆನ್‌ಬರ್ಗ್

   (C) ಮುಸ್ಸೊಲಿನಿ

   (D) ಮೂರನೆಯ ಇಮ್ಯಾನ್ಯುವೆಲ್

   ಉತ್ತರ : ____________________

7. ಗ್ರಾಮಾಂತರ ಮಹಿಳೆಯರ ವಿಕಾಸಕ್ಕೆ ಅನುವು ಮಾಡಿಕೊಟ್ಟಿರುವ ಕಾರ್ಯಕ್ರಮ

   (A) ಸ್ತ್ರೀಶಕ್ತಿ

   (B) ಸ್ವಯಂಸಿದ್ಧ

   (C) ಬಾಲಿಕಾ ಸಮೃದ್ಧಿ ಯೋಜನೆ

   (D) ರಾಷ್ಟ್ರೀಯ ಮಹಿಳಾ ವಿಮೋಚನೆ

   ಉತ್ತರ : ____________________



www.careerindia.com

CAREERINDIA



8. ಮಗುವಿನ ಹಕ್ಕುಗಳಿಗೆ ಸಂಬಂಧಿಸಿದಂತೆ ಪ್ರಸಿದ್ಧವಾದ ದಾಖಲೆಯನ್ನು ವಿಶ್ವಸಂಸ್ಥೆಯ ಯಾವ ಅಂಗ ಸಂಸ್ಥೆಯು ಸಿದ್ಧಪಡಿಸಿತು ?

(A) ಸಾಮಾನ್ಯ ಸಭೆ

(B) ಭದ್ರತಾ ಸಮಿತಿ

(C) ಅಂತರರಾಷ್ಟ್ರೀಯ ನ್ಯಾಯಾಲಯ

(D) ಸಚಿವಾಲಯ

ಉತ್ತರ : ______________________________

9. ದಕ್ಷಿಣ ಏಷ್ಯಾ ಪ್ರಾದೇಶಿಕ ಸಹಕಾರ ಸಂಸ್ಥೆ ( SAARC ) ಯ ಆಡಳಿತ ಕಚೇರಿ ಇರುವ ಸ್ಥಳ

(A) ಬ್ಯಾಂಕಾಕ್

(B) ಕಾಠ್ಮಂಡು

(C) ಕೊಲೊಂಬೋ

(D) ದೆಹಲಿ

ಉತ್ತರ : ______________________________

10. ಜಾಸ್ಕರ್ ಶ್ರೇಣಿಯು ಈ ಮಳೆ ಬೀಳುವ ಪ್ರದೇಶದಲ್ಲಿದೆ

(A) ಹೆಚ್ಚು

(B) ಅತ್ಯಂತ ಹೆಚ್ಚು

(C) ಕಡಿಮೆ

(D) ಅತ್ಯಂತ ಕಡಿಮೆ

ಉತ್ತರ : ______________________________

www.careerindia.com

CAREERINDIA



11. ಸುಂದರಿ ಮರಗಳು ಕಾಣಬರುವುದು ಈ ಒಂದು ಪ್ರದೇಶದಲ್ಲಿ

(A) ಉಷ್ಣವಲಯದ ಎಲೆ ಉದುರುವ ಕಾಡುಗಳು

(B) ಮ್ಯಾಂಗ್ರೋವ್ ಕಾಡುಗಳು

(C) ಮರುಭೂಮಿ ಸಸ್ಯವರ್ಗ

(D) ಹಿಮಾಲಯ ಸಸ್ಯವರ್ಗ

ಉತ್ತರ : ______________________________

12. ಕೆಳಗಿನವುಗಳಲ್ಲಿ ಯಾವುದು ಮುಖ್ಯವಾದ ಮಿಶ್ರಲೋಹವಾಗಿದೆ ?

(A) ಮ್ಯಾಂಗನಿಸ್ ಅದಿರು

(B) ಬಾಕ್ಸೈಟ್ ಅದಿರು

(C) ಕಬ್ಬಿಣದ ಅದಿರು

(D) ಅಭ್ರಕ

ಉತ್ತರ : ______________________________

13. 1919 ರಲ್ಲಿ ಒಂದು ಉಕ್ಕಿನ ಕಾರ್ಖಾನೆಯು ಪ್ರಾರಂಭವಾದದ್ದು

(A) ಭದ್ರಾವತಿ

(B) ಬರ್ನ್‌ಪುರ

(C) ರೂರ್ಕೆಲಾ

(D) ಜಮ್‌ಷೆಡ್‌ಪುರ

ಉತ್ತರ : ______________________________

www.careerindia.com

CAREERINDIA



14. ಈ ಕೆಳಕಂಡ ಒಂದು ಪಂಚವಾರ್ಷಿಕ ಯೋಜನೆಯ ಕಾಲವು ಹಸಿರು ಕ್ರಾಂತಿಗೆ ಸಾಕ್ಷಿಯಾಯಿತು

    (A) ಮೊದಲನೆಯ

    (B) ಎರಡನೆಯ

    (C) ಮೂರನೆಯ

    (D) ನಾಲ್ಕನೆಯ

    ಉತ್ತರ : ______________________________

15. ಈ ಕೆಳಕಂಡ ಒಂದು ಗೃಹ ಕೈಗಾರಿಕೆಗೆ ಉದಾಹರಣೆಯಾಗಿದೆ

    (A) ಹಗ್ಗ ತಯಾರಿಸುವುದು

    (B) ಸಿದ್ಧಪಡಿಸಿದ ಉಡುಪುಗಳು

    (C) ಸಾಬೂನುಗಳು

    (D) ರಾಸಾಯನಿಕ ವಸ್ತುಗಳು

    ಉತ್ತರ : ______________________________

II. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿ ಬರೆಯಿರಿ : 5 × 1 = 5

16. ಕೌಂಟ್ ಡಿ ಲಾಲಿಯು ....................................................................ಲ್ಲಿ ಬ್ರಿಟಿಷರಿಗೆ ಶರಣಾದ.

17. ಈಜಿಪ್ಟ್‌ನ ರಾಜನನ್ನು ಪದಚ್ಯುತಗೊಳಿಸಿದವನು ..............................................................

18. 1952ರಲ್ಲಿ ಭಾರತ ಸರ್ಕಾರವು ................................................................ಗಳನ್ನು ತೆರೆಯಿತು.

19. ಭಾರತದಲ್ಲಿ ಅತಿ ಹೆಚ್ಚು ಉಷ್ಣಾಂಶ ಹೊಂದಿರುವ ಗಂಗಾನಗರವು ಇರುವ ರಾಜ್ಯ ..................................

    ..............................................................................................................

20. ನಾವು ಪೆಟ್ರೋಲಿಯಂ ಮತ್ತು ಅದರ ಉಪವಸ್ತುಗಳನ್ನು ...................................................ಗಳಿಂದ ಆಮದು ಮಾಡಿಕೊಳ್ಳುತ್ತೇವೆ.

www.careerindia.com

CAREERINDIA



III. 21. ಈ ಕೆಳಗೆ ಕೊಟ್ಟಿರುವ **A** ಪಟ್ಟಿಯಲ್ಲಿನ ಅಂಶಗಳನ್ನು **B** ಪಟ್ಟಿಯಲ್ಲಿನ ಅಂಶಗಳೊಡನೆ ಹೊಂದಿಸಿ ಬರೆಯಿರಿ : 5 × 1 = 5

| ***A* ಪಟ್ಟಿ** | | ***B* ಪಟ್ಟಿ** | |
|---|---|---|---|
| a) | ಗವರ್ನರ್ ಜನರಲ್–ವೈಸರಾಯ್ ಎಂಬ ಪದನಾಮವಾಯಿತು | i) | 1853ರ ಶಾಸನ |
| b) | ಕಾನೂನು ಸದಸ್ಯನ ಸೇರ್ಪಡೆ | ii) | ವಿವೇಕಾನಂದ |
| c) | ಆಂಗ್ಲೊ–ಓರಿಯಂಟಲ್ ಶಾಲೆ | iii) | 1833ರ ಶಾಸನ |
| d) | ರಾಮಕೃಷ್ಣ ಮಿಷನ್ | iv) | ಜ್ಯೋತಿಬಾ ಫುಲೆ |
| e) | ಸತ್ಯಶೋಧಕ ಸಮಾಜ | v) | ಸರ್ ಸಯ್ಯದ್ ಅಹಮದ್ ಖಾನ್ |
| | | vi) | 1858ರ ಭಾರತ ಸರ್ಕಾರ ಶಾಸನ |
| | | vii) | ರಾಮಕೃಷ್ಣ ಪರಮಹಂಸ |
| | | viii) | ರಾಜಾ ರಾಮ್‌ಮೋಹನ ರಾಯ್ |

ಉತ್ತರಗಳು : a) ______________________

b) ______________________

c) ______________________

d) ______________________

e) ______________________

www.careerindia.com

CAREERINDIA



IV. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : $9 \times 1 = 9$

22. ಮೊದಲ ಆಂಗ್ಲೋ-ಮರಾಠ ಯುದ್ಧದ ಸಮಯದಲ್ಲಿದ್ದ ಗವರ್ನರ್ ಜನರಲ್ ಯಾರು ?

---

---

23. ಮೊದಲ ಮಹಾಯುದ್ಧಕ್ಕೆ ತತ್‌ಕ್ಷಣದ ಕಾರಣವೇನಾಗಿತ್ತು ?

---

---

24. ಮಾರ್ಷಲ್ ಯೋಜನೆ ಎಂಬ ಆಶಾದಾಯಕ ಕಾರ್ಯಕ್ರಮವನ್ನು ಯಾರು ಕೈಗೆತ್ತಿಕೊಂಡರು ?

---

---

25. ವಿಶ್ವ ವಾಣಿಜ್ಯ ಸಂಸ್ಥೆಯ ಪ್ರಮುಖ ಗುರಿ ಏನಾಗಿದೆ ?

---

---

26. 1988 ರಲ್ಲಿ ನಿಶ್ಯಸ್ತ್ರೀಕರಣ ಒಪ್ಪಂದಕ್ಕೆ ಯಾವ ದೇಶಗಳು ಸಹಿ ಮಾಡಿದವು ?

---

---

www.careerindia.com

CAREERINDIA



27. ಹಿಂದುಳಿದ ರಾಷ್ಟ್ರಗಳನ್ನು 'ತೃತೀಯ ಜಗತ್ತು' ಎಂದು ಯಾರು ಕರೆದರು ?

28. ವನಮಹೋತ್ಸವದ ಉದ್ದೇಶವೇನು ?

29. ಭಾರತದ ಅತ್ಯಂತ ಹಳೆಯ ಮತ್ತು ಈಗಲೂ ಚಾಲ್ತಿಯಲ್ಲಿರುವ ವರ್ತಮಾನ ಪತ್ರಿಕೆ ಯಾವುದು ?

30. ಏಳನೇ ಪಂಚವಾರ್ಷಿಕ ಯೋಜನೆಯ ಪ್ರಧಾನ ಆದ್ಯತೆ ಯಾವುದಾಗಿತ್ತು ?

V. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $16 \times 2 = 32$

31. ನಾಲ್ಕನೇ ಆಂಗ್ಲೋ-ಮೈಸೂರು ಯುದ್ಧದ ಫಲಿತಾಂಶಗಳಾವುವು ?



www.careerindia.com

CAREERINDIA



32. ಸರ್ ಎಂ. ವಿಶ್ವೇಶ್ವರಯ್ಯನವರು ಸಲ್ಲಿಸಿರುವ ಯಾವುದಾದರೂ ನಾಲ್ಕು ಸೇವೆಗಳನ್ನು ಬರೆಯಿರಿ.

33. ಇಂಗ್ಲೆಂಡಿನ ಕೈಗಾರಿಕಾ ಕ್ರಾಂತಿಯು ಭಾರತದ ಕೈಗಾರಿಕೆಗಳಿಗೆ ಹೇಗೆ ಆಘಾತಕಾರಿಯಾಯಿತು ?

34. ಈಸೂರಿನ ಜನರು ತಮ್ಮ ಗ್ರಾಮವನ್ನು ಏಕೆ 'ಸ್ವತಂತ್ರ' ಎಂದು ಘೋಷಿಸಿದರು ? ಅದರ ಫಲಿತಾಂಶವೇನು ?

www.careerindia.com

CAREERINDIA



35. ಗೋವಾ ವಿಮೋಚನಾ ಚಳುವಳಿಯ ಬಗ್ಗೆ ಟಿಪ್ಪಣಿ ಬರೆಯಿರಿ.

36. ಜಪಾನ್ ಹೇಗೆ ಆಧುನೀಕರಣಗೊಂಡಿತು ?

37. ಕ್ಯಾಂಪ್ ಡೇವಿಡ್ ಒಪ್ಪಂದ ಯಾವ ದೇಶಗಳ ನಡುವೆ ಆಯಿತು ? ಅದರ ಪರಿಣಾಮವೇನು ?

www.careerindia.com

CAREERINDIA



38. ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗಗಳ ಹಿತವನ್ನು ರಕ್ಷಿಸಲು ಕೈಗೊಂಡಿರುವ ಯಾವುದಾದರೂ ಎರಡು ಕ್ರಮಗಳನ್ನು ತಿಳಿಸಿ.

39. ವಿಶ್ವಸಂಸ್ಥೆಯ ಯಾವುದಾದರೂ ಎರಡು ಧ್ಯೇಯಗಳನ್ನು ನಮೂದಿಸಿ.

40. ಪಶ್ಚಿಮ ಮತ್ತು ಪೂರ್ವ ಘಟ್ಟಗಳನ್ನು ವ್ಯತ್ಯಯಿಸಿ.

www.careerindia.com

CAREERINDIA



41. ಮಾನವ ಹಕ್ಕುಗಳ ದಿಸೆಯಲ್ಲಿ ಉದಾಹರಿಸಬಹುದಾದ ಎರಡು ಪ್ರಮುಖ ಘಟನೆಗಳನ್ನು ಹೆಸರಿಸಿ.

_______________________________________________

_______________________________________________

_______________________________________________

_______________________________________________

42. ಅಸಾಂಪ್ರದಾಯಿಕ ಪ್ರಮುಖವಾದ ಶಕ್ತಿ ಸಂಪನ್ಮೂಲಗಳಾವುವು ?

_______________________________________________

_______________________________________________

_______________________________________________

_______________________________________________

43. ಭಾರತದಲ್ಲಿ ಕಂಡುಬರುವ ನಾಲ್ಕು ಮುಖ್ಯ ಕೈಗಾರಿಕಾ ಪ್ರದೇಶಗಳಾವುವು ?

_______________________________________________

_______________________________________________

_______________________________________________

_______________________________________________

www.careerindia.com

CAREERINDIA



44. ತಲಮಾರ್ಜನ ಅಥವಾ ನಿಕರ್ಷಣ ಎಂದರೇನು ? ಅದು ಯಾವ ಬಂದರಿನಲ್ಲಿ ಕಂಡುಬರುತ್ತದೆ ?

45. ಗೃಹ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳು ಎದುರಿಸುತ್ತಿರುವ ಯಾವುದಾದರೂ ನಾಲ್ಕು ಸಮಸ್ಯೆಗಳನ್ನು ನಮೂದಿಸಿ.

46. 'ಆರ್ಥಿಕ ಯೋಜನೆ' ಇದನ್ನು ನಿರೂಪಿಸಿ. ಅದರ ಯಾವುದಾದರೂ ಎರಡು ಗುರಿಗಳನ್ನು ಹೆಸರಿಸಿ.

www.careerindia.com

CAREERINDIA



VI. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಉತ್ತರಿಸಿ : $6 \times 3 = 18$

47. ಭಾರತದಲ್ಲಿ ಪೋರ್ಚುಗೀಸರು ತಮ್ಮ ಅಧಿಕಾರವನ್ನು ಸ್ಥಾಪಿಸಲು ಏಕೆ ವಿಫಲರಾದರು ?

48. ಭಾರತದ ಪ್ರಥಮ ಸ್ವಾತಂತ್ರ್ಯಕ್ಕೆ ಕಾರಣವಾದ ರಾಜಕೀಯ ಅಂಶಗಳಾವುವು ?

www.careerindia.com

CAREERINDIA



49. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣವನ್ನು ಜಾರಿಗೊಳಿಸಲು ಕೈಗೊಂಡಿರುವ ಕ್ರಮಗಳನ್ನು ಹೆಸರಿಸಿ.

50. ಭಾರತದಲ್ಲಿ ಭೂ ಬಳಕೆಯು ಯಾವ ಅಂಶಗಳಿಂದ ಪ್ರಭಾವಿತವಾಗಿದೆ ?

www.careerindia.com

CAREERINDIA



51. ಭಾರತದಲ್ಲಿ ಅನುಸರಿಸಲಾಗುತ್ತಿರುವ ವಿವಿಧ ವ್ಯವಸಾಯದ ವಿಧಾನಗಳಾವುವು ? ಅವುಗಳನ್ನು ಅನುಸರಿಸಲು ಯಾವುದಾದರೂ ಎರಡು ಕಾರಣಗಳನ್ನು ನೀಡಿರಿ.

52. ಚಿಲ್ಲರೆ ವ್ಯಾಪಾರಿಗಳ ಸೇವೆಗಳಾವುವು ?

www.careerindia.com

CAREERINDIA



VII. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎಂಟು ವಾಕ್ಯಗಳಲ್ಲಿ ಉತ್ತರಿಸಿ : $3 \times 4 = 12$

53. ನಮ್ಮ ಸ್ವಾತಂತ್ರ್ಯ ಚಳುವಳಿಯಲ್ಲಿ ಮಹಾತ್ಮ ಗಾಂಧೀಜಿಯವರು ಯಾವ ಪಾತ್ರವನ್ನು ನಿರ್ವಹಿಸಿದರು ?

www.careerindia.com

CAREERINDIA



54. 'ವಿಶ್ವಸಂಸ್ಥೆಯ ಪ್ರಮುಖ ಸಹಾಯಕ ಸಂಸ್ಥೆ ಯುನೆಸ್ಕೊ' ( UNESCO ). ಏಕೆ ?

www.careerindia.com

CAREERINDIA



55. ನಿಯಂತ್ರಿತ ಮಾರುಕಟ್ಟೆ ಸಮಿತಿಯು ಏನನ್ನು ಒಳಗೊಂಡಿದೆ ? ಆ ಸಮಿತಿಯ ಕಾರ್ಯಗಳನ್ನು ನಮೂದಿಸಿ.

www.careerindia.com

CAREERINDIA



VIII. 56. ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಕೆಳಗೆ ಕೊಟ್ಟಿರುವುದನ್ನು ಗುರುತಿಸಿ : 1 + 3 = 4

a) ಪಾಟಕಿ ಬಮ್

b) ಯಮುನಾ ನದಿ

c) ಭಾರತದ ಚಹಾ ಬಂದರು

www.careerindia.com

CAREERINDIA



*ಸೂಚನೆ : ಅಂಧ ವಿದ್ಯಾರ್ಥಿಗಳಿಗೆ ಮಾತ್ರ : ಪರ್ಯಾಯ ಪ್ರಶ್ನೆ:* (ಪ್ರಶ್ನೆ ಸಂಖ್ಯೆ 56ಕ್ಕೆ ಬದಲಾಗಿ)

ಭಾರತೀಯರ ಜನಜೀವನದಲ್ಲಿ ಹಿಮಾಲಯ ಪರ್ವತಗಳು ಏಕೆ ಮುಖ್ಯವಾಗಿವೆ ? 4

www.careerindia.com

www.careerindia.com